# ಸೆಲೆಬ್ರಿಟಿ

■ ಹನಿ

## ಅವಳಿ ಮಕ್ಕಳ ಚಿನ್ನ!

ಲಂಡನ್ ಒಲಿಂಪಿಕ್ಸ್‌ನ 5000 ಮೀ. ಮತ್ತು 10000 ಮೀಟರ್ಸ್ ದೂರ ಓಟಗಳಲ್ಲಿ ಚಿನ್ನ ಡಬಲ್ಸ್ ಗೆದ್ದ ಮೋ ಫರಾಹ್ ಈಗ ಬ್ರಿಟನ್ನಿನ ಹೊಸ ಕ್ರೀಡಾ ತಾರೆ. ಎರಡೂ ಓಟಗಳ 'ಯೂರೋ ಚಾಂಪಿಯನ್' ಮೋ ಫರಾಹ್‌ನ, ಈ ಡಬಲ್ಸ್ ಸಾಧನೆಗೆ 'ಜಗತ್ತಿನ ಅತ್ಯಂತ ವೇಗದ ಓಟಗಾರ' ಎನ್ನಿಸಿರುವ ಉಸ್ಸೇನ್ ಬೋಲ್ಟ್ ಕೂಡಾ ಎದ್ದು ನಿಂತು, ಎರಡೂ ಕೈಗಳ ಬೆರಳುಗಳನ್ನು ನೆತ್ತಿಯ ಮೇಲಿಟ್ಟು ಗೌರವ ಸೂಚಿಸಿದ್ದಾನೆ. 5 ಅಡಿ 9 ಇಂಚು ಎತ್ತರದ ನೀಳಕಾಯದ ಮೋಗೆ, 'ಬ್ರಿಟನ್ನಿನ ಸಾರ್ವಕಾಲಿಕ ಶ್ರೇಷ್ಠ ಓಟಗಾರ' ಎಂಬ ಬಿರುದು ಲಭಿಸಿದೆ. ಹೀಗೆ ದೂರ ಓಟದ 'ಡಬಲ್ಸ್ ಚಿನ್ನ' ಸಾಧಿಸಿದವರಲ್ಲಿ ಮೋ ಏಳನೆಯಾತ.



29ರ ಹರೆಯದ ಮೋ ಫರಾಹ್ ಹುಟ್ಟಿದ್ದು ಬರಗಾಲ ಪೀಡಿತ ಸೊಮಾಲಿಯಾದಲ್ಲಿ. ಈಗ ಬ್ರಿಟನ್ನಿನ ಪ್ರಜೆಯಾದರೂ ದೂರ ಓಟದ ತರಬೇತಿ ಪಡೆಯುತ್ತಿರುವುದು ಅಮೆರಿಕಾದ ಒರೆಗಾಂವ್‌ನಲ್ಲಿ. ಮೋ ನ ಹೆಂಡತಿ ತಾನಿಯಾ ಈ ವಾರದಲ್ಲಿ ಅವಳಿ ಮಕ್ಕಳಿಗೆ ಜನ್ಮ ನೀಡುವ ಸಂಭ್ರಮದಲ್ಲಿದ್ದಾಳೆ. ಮಲಮಗಳು ರಿಹಾನಾ ಜತೆಗೆ ಅವಳದ್ದು ಸುಖೀ ಸಂಸಾರ. ಎರಡನೇ ಚಿನ್ನ ಗೆದ್ದ ಕೂಡಲೇ ಮೋ ಸಂಭ್ರಮದಿಂದ 'ಹುಟ್ಟಲಿರುವ ನನ್ನ ಇಬ್ಬರು ಮಕ್ಕಳಿಗೆ ತಲಾ ಒಂದೊಂದು ಚಿನ್ನದ ಪದಕ ಹಂಚುತ್ತೇನೆ' ಎಂದಿದ್ದಾನೆ.

'ಶನಿವಾರ ಎರಡನೇ ಚಿನ್ನ ಗೆದ್ದ ಬಳಿಕ ಇಡೀ ರಾತ್ರಿ ನಿದ್ರೆ ಮಾಡಲಿಲ್ಲ. ರಾತ್ರಿ ಒಂದೂವರೆವರೆಗೆ 'ಡೋಪ್ ಟೆಸ್ಟಿಂಗ್' ನಡೆಯಿತು. ಬಳಿಕ ಹೆಂಡತಿ, ಮಗಳಿಗೆ ಫೋನ್ ಮಾಡಿದೆ. ಮರುದಿನ ಇಡೀ ದೇಶದಲ್ಲಿ ಉತ್ಸವದ ಕಳೆ. ಶುಭಾಶಯದ ಮಳೆ ಎಷ್ಟು ಜೋರಾಗಿತ್ತೆಂದರೆ.. ನನ್ನ ಮೊಬೈಲ್ ನಂಬರ್‌ಅನ್ನೇ ಬದಲಿಸ ಬೇಕಾಯಿತು!' ಎಂದಿದ್ದಾನೆ ಮೋ. ಸದ್ಯಕ್ಕೆ ಬೂಪಾ, ನೈಕ್ ಶೂ ಬ್ರ್ಯಾಂಡ್‌ಗಳ ರಾಯಭಾರಿ ಆಗಿರುವ ಮೋ ಜಾಹೀರಾತು ಮೌಲ್ಯ ಇನ್ನಷ್ಟು ವರ್ಧಿಸಿದೆ.

ಚಾಂಪಿಯನ್‌ಗಳು ತನ್ನಷ್ಟಕ್ಕೇ ಹುಟ್ಟುವುದಿಲ್ಲ ಎನ್ನುವುದು ನಿಜ. ಸಂಭ್ರಮದಿಂದ ಬ್ರಿಟನ್ನಿನ ಜನತೆ ಇನ್ನೂ ಹೊರಬಂದಿಲ್ಲ. ಆದರೆ ಮೋ ಅದಾಗಲೇ ಮುಂದಿನ ಕೂಟಕ್ಕೆ ಅಭ್ಯಾಸ ಆರಂಭಿಸಿಯಾಗಿದೆ. ಚಿನ್ನ ಗೆದ್ದ ಮೂರನೇ ದಿನಕ್ಕೆ ಬೆಳಿಗ್ಗೆ ಎದ್ದು 10 ಮೈಲಿ ಓಡಿದ್ದಾನೆ. ಮರುದಿನ ಬೆಳಿಗ್ಗೆ 5 ಹಾಗೂ ಸಂಜೆ 7 ಮೈಲಿಯ ಓಟ. 'ಸಾಮಾನ್ಯವಾಗಿ ಅಭ್ಯಾಸದ ವೇಳೆ ಒಂದು ಮೈಲಿಯನ್ನು ಐದು ನಿಮಿಷಕ್ಕೆ ಓಡುತ್ತೇನೆ. ಆದರೆ ಈಗ ಅದ್ಯಾಕೋ ವೇಗ ಕಡಿಮೆಯಾಗಿದೆ. ಅಭ್ಯಾಸ ಇನ್ನಷ್ಟು ಕಠಿಣವಾಗಬೇಕು' ಎಂದು ಮೋ ಹೇಳಿರುವುದು ನೋಡಿದರೆ, ಆತ ನಿಜವಾದ ಚಾಂಪಿಯನ್ ಅನ್ನಿಸುತ್ತಿದೆ. ಒಲಿಂಪಿಕ್ಸ್‌ನ 5000 ಮೀಟರ್ ಓಟದಲ್ಲಿ ಈತ ಕೊನೆಯ ಒಂದು ಮೈಲಿಯನ್ನು ಕೇವಲ ನಾಲ್ಕೇ ನಿಮಿಷಗಳಲ್ಲಿ ಕ್ರಮಿಸಿದ್ದ!

ಸೋಮಾಲಿಯಾ ಹಾಗೂ ಆಫ್ರಿಕಾದ ಬರಗಾಲ ಪೀಡಿತರಿಗೆ ನೆರವಾಗಲು ಈತ 'ಮೋ ಫರಾಹ್ ಫೌಂಡೇಶನ್' ಸ್ಥಾಪಿಸಿದ್ದಾನೆ. ಸೆಪ್ಟೆಂಬರ್ 1ರಂದು ಫೌಂಡೇಶನ್ ಏರ್ಪಡಿಸಿರುವ ಔತಣಕೂಟದ ಟಿಕೆಟ್‌ಗಳು 'ಸೋಲ್ಡ್ ಔಟ್' ಆಗಿವೆ. 'ಹೊಟ್ಟೆ ತುಂಬಿದವರಿಗೆ ಔತಣ ಮಾಡಿದರೆ, ಹೊಟ್ಟೆಗಿಲ್ಲದ ನನ್ನೂರಿನ ಮಕ್ಕಳು ಬದುಕುತ್ತಾರೆ' ಎನ್ನುವುದು ಮೋ ಗೆ ಚೆನ್ನಾಗಿ ಗೊತ್ತಿದೆ!

## ಬಾಬಾ ಸಂಕಷ್ಟ



'90ರ ದಶಕದಲ್ಲಿ ಇಂಡಿಪಾಪ್ ಸಂಗೀತದ ಚಾಂಪಿಯನ್ ಆಗಿದ್ದಾತ – ಬಾಬಾ ಸೆಹಗಲ್. 'ಥಂಡಾ ಥಂಡಾ ಪಾನಿ' ಮತ್ತು 'ಮಂಜುಳಾ' ಎಂಬ ಆಲ್ಬಂಗಳಂತೂ ಸೂಪರ್‌ಹಿಟ್! ಬಾಲಿವುಡ್‌ನಲ್ಲೂ ಮಿಂಚಿ, ಟೀವಿ ಚಾನೆಲ್‌ಗಳಲ್ಲಿ ಸದಾ ಕಾಣಿಸಿಕೊಳ್ಳುವ ಬಾಬಾ ಸೆಹಗಲ್ ಈಗ ಸಂಸಾರದ ಸರಿಗಮದಲ್ಲಿ ಸಿಕ್ಕು ಅಪ್ಪಚ್ಚಿಯಾಗಿದ್ದಾನೆ.

ಕಳೆದ ಎರಡೂವರೆ ವರ್ಷಗಳಿಂದ ಬಾಬಾ ಸೆಹಗಲ್ ತನ್ನ ಪತ್ನಿ ಅಂಜು ಮತ್ತು ಮಗ ತನ್ವೀರ್‌ನನ್ನು ದೂರ ಮಾಡಿದ್ದಾನೆ. ಬೇರೆ ಮನೆಯಲ್ಲಿ ಆತನ ಜತೆಗೆ 'ಲಿವಿಂಗ್ ಇನ್' ಮಾಡಿಕೊಂಡಿರುವಾಕೆ ಅಶಿಮಾ ಖೈರಾ. ಕಳೆದ ವಾರ ಈ ಅಶಿಮಾ ಖೈರಾ ಮುಂಬೈ ಠಾಣೆಯೊಂದರಲ್ಲಿ ಬಾಬಾ ಸೆಹಗಲ್‌ನ ಮಗ ತನ್ವೀರ್ ವಿರುದ್ಧ ದೂರು ನೀಡಿದ್ದು, ಪೊಲೀಸರು ಜಾಮೀನುರಹಿತ ಮೊಕದ್ದಮೆ ದಾಖಲಿಸಿದ್ದಾರೆ. "ನನ್ನ ಮತ್ತು ಬಾಬಾನ ಮನೆಗೆ ನುಗ್ಗಿದ ತನ್ವೀರ್ ಮತ್ತು ಆತನ ಗೆಳೆಯರು ಕೆಟ್ಟದಾಗಿ ನಡೆದುಕೊಂಡಿದ್ದಾರೆ" ಎನ್ನುವುದು ಅಶಿಮಾ ದೂರು. ಈ ದೂರಿನ ವಿರುದ್ಧ ಮಾಧ್ಯಮಗಳಲ್ಲಿ ಕಿಡಿ ಕಾರಿರುವ ಅಂಜು, ಗಂಡನ ನಡತೆಯ ಬಗ್ಗೆ ರೋಷ ತೋರಿಸಿದ್ದಾಳೆ.

ಪತ್ನಿ ಅಂಜುವಿನಿಂದ ಡೈವೋರ್ಸ್ ಕೋರಿ ಬಾಬಾ, ಕಳೆದ ವರ್ಷ ಆಗಸ್ಟ್ ನಲ್ಲೇ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾನೆ. 'ಈಕೆ ಪ್ರತಿಯೊಂದಕ್ಕೂ ನನ್ನ ಮೇಲೆ ಅಧಿಕಾರ ಚಲಾಯಿಸುತ್ತಾಳೆ. ಹೊಂದಿ ಬಾಳುವುದು ಸಾಧ್ಯವೇ ಇಲ್ಲ' ಎನ್ನುವುದು ಆತನ ವಾದ. '20 ವರ್ಷಗಳಿಂದ ಗಂಡನ ಸೇವೆ ಮಾಡಿ ಜತೆಗಿದ್ದವಳು ನಾನು. ಈಗ ಏಕೆ ಡೈವೋರ್ಸ್ ನೀಡಲಿ? ನನಗೆ ಗಂಡನ ಬಗ್ಗೆ ಈಗಲೂ ಪ್ರೀತಿ ಇದೆ. ಇದೆಲ್ಲ ಆ ಹೆಂಗಸಿನ ಕಿತಾಪತಿ' ಎನ್ನುವುದು ಅಂಜು ವಾದ. ಈ ಗಲಾಟೆಯಲ್ಲಿ 17ರ ಹದಿಹರೆಯದ ಮಗ ಕಂಗಾಲಾಗಿದ್ದಾನೆ. ಆತ ತನಗೆ ಅಪ್ಪ ಬೇಕು ಎಂದು, ಅಪ್ಪನ ಮನೆಯಲ್ಲೇ ಕೆಲವು ತಿಂಗಳಿಂದ ವಾಸವಿದ್ದ. ಆದರೆ ಅಶಿಮಾಳ ಪೊಲೀಸ್ ದೂರಿನಿಂದ ಆತ ಲಾಕಪ್ ಸೇರಿದ್ದಾನೆ.

ಎಂಟಿವಿ ಏಷ್ಯಾ ಚಾನೆಲ್ ಮೂಲಕ ಜಾಗತಿಕ ಖ್ಯಾತಿ ಪಡೆದ ಬಾಬಾ, ಹಲವು ಹಿಂದಿ ಸಿನಿಮಾಗಳಲ್ಲಿ ಹಾಡಿದ್ದಾನೆ. ತೆಲುಗಿನಲ್ಲಿ ದೇವಿಶ್ರೀಪ್ರಸಾದ್ ಸಂಗೀತ ನಿರ್ದೇಶನದ ಸಿನಿಮಾದಲ್ಲಿ ಈತನ ಹಾಡು ಕಡ್ಡಾಯ! 2005ರವರೆಗೆ ನ್ಯೂಯಾರ್ಕ್‌ನಲ್ಲಿ ನೆಲೆಸಿದ್ದ ಬಾಬಾ ವಾಪಸ್ ಬಂದ ಬಳಿಕ 'ವೆಲ್‌ಕಂ ಟು ಮುಂಬೈ' ಎಂಬ ಆಲ್ಬಂ ತಂದರೂ ಹಳೆಯ ಖದರ್ ಉಳಿಯಲಿಲ್ಲ. ಸದ್ಯಕ್ಕೆ ಟೀವಿಯಲ್ಲಷ್ಟೇ ಈತನ ಮುಖ ಕಾಣಿಸುತ್ತಿದೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65